ಇಂಥಾ ಪರಿ ಯಾವ ಯುಗದಾಗೂ ಹಾಳಾಗಿಲ್ಲರಿ. ಹಂಗs ಯಾರು ಎಲ್ಲೆ ಇದ್ದಾರ? ಮುಂಚೆ ಹೆಂಗಿದ್ದವರು ಈಗ ಹೆಂಗ ಆಗ್ಯಾರ... ಲಗ್ನ ಆಗಿ ಗೋಳ್ಯಾಡಲೀಖತ್ತಾರೋ ಅಥವಾ ಲಿವ್ ಇನ್ ಬಂಧನದಾಗ ಸಂತೋಷದಿಂದ ಇದ್ದಾರೋ? ಹಿಂಗs ಬೇಕಾಗಿರಲಿ ಬ್ಯಾಡಾಗಿರಲಿ ಅಷ್ಟೂ ಮಾಹಿತಿ ನಿಮ್ಮ ಬಟ್ಟಿನ ತುದ್ಯಾಗs! ಭಾಳ ಮಂದಿ ಈ ಸಾಮಾಜಿಕ ಬಲ್ಯಾಗ ಸಿಕ್ಕೊಂಡಾರ. ಕೆಲ ಮಂದಿ ಜಾಣರು. ಈ ಬಲೆಯೊಳಗ ತಮಗ ಬೇಕಾದಾಗ ಬರತಾರ ಬ್ಯಾಡಾದಾಗ ಹೊರಗ ಹೋಗತಾರ. ಅವರು ಬಂದದ್ದು ಹೋದದ್ದು ಯಾರಿಗೂ ಗೊತ್ತಾಗೂದುಲ್ಲ. ಅವರು ತಮ್ಮ ಮಾರಿಯ ಗ್ವಾಡೀಮ್ಯಾಲೆ ಏನೂ ಬರಿಯೂದುಲ್ಲ. ಏನೂ ಹಂಚಿಕೊಳ್ಳೂದುಲ್ಲ. ಕಮೆಂಟು, ಲೈಕು ಮಾಡೂದುಲ್ಲ. ಇಂಥ ಮಂದಿಯದೊಂದು ಪರಿಯಾದರ ತಮ್ಮ ಗ್ವಾಡೀ ಮ್ಯಾಲೆ ದಿನಕೊಂದಿಷ್ಟು ಗೀಚದಿದ್ದರ ಉಂಡನ್ನ ಕರಗದ ಮಂದಿ. ಇವರಿಗೆ ತಾವೇನರೇ, ತಮ್ಮ ಗ್ವಾಡಿ ಮ್ಯಾಲೆ ಬರೆಯಲೇ ಬೇಕು, ಬರೆದದ್ದು ಮಂದಿ ಮೆಚ್ಚಲೇ ಬೇಕು, ಮೆಚ್ಚಿ ಹಾಡಿ ಹೊಗಳಲೇ ಬೇಕು. ಅದನ್ನು ನೋಡಿಯೇ ಇವರು ಬೀಗುತ್ತಾ ನಿದ್ದೀಗೆ ಜಾರಬೇಕು. ಯಾರು ಮೆಚ್ಚದಿದ್ದರೆ

ಚಿತ್ರಗಳು: ಪ್ರಕಾಶ್ ಶೆಟ್ಟಿ

